# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1085 |
| ಸದಸ್ಯರ ಹೆಸರು | : | ಶ್ರೀ ಆರ್. ಧರ್ಮಸೇನ |
| ಉತ್ತರಿಸುವ ಸಚಿವರು | : | ಮಾನ್ಯ ಮುಖ್ಯಮಂತ್ರಿಗಳು |
| ಉತ್ತರಿಸುವ ದಿನಾಂಕ | : | 20.12.2018. |

| ಪ್ರಶ್ನೆ | ಉತ್ತರ |
|---|---|
| ಅ)ಬಡ್ತಿಯಲ್ಲಿ ಮೀಸಲಾತಿಯನ್ನು ನ್ಯಾಯಾಲಯದ ಆದೇಶದಂತೆ ರದ್ದುಪಡಿಸಿರುವುದರಿಂದ ಹಿಂಬಡ್ತಿಯಾಗಿರುವ ಪರಿಶಿಷ್ಟ ಜಾತಿ/ ವರ್ಗಗಳ ನೌಕರರ ಹಿತ ಕಾಪಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; | ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲ್ ಸಂಖ್ಯೆ: 2368/2011 ಬಿ.ಕೆ. ಪವಿತ್ರ ಮತ್ತು ಇತರರು ವಿರುದ್ಧ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ದಿನಾಂಕ: 09.02.2017ರಂದು ನೀಡಿರುವ ತೀರ್ಪಿನಲ್ಲಿ **Karnataka Determination of Seniority of the Government Servants Promoted on the basis of Reservation (to the posts in the civil services of the State) Act, 2002**ರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸರ್ಕಾರಿ ನೌಕರರು ಮೀಸಲಾತಿ ನೀತಿಯನ್ವಯ ಮುಂಬಡ್ತಿ ಹೊಂದಿದ ಹುದ್ದೆಯಲ್ಲಿ ತತ್ಪರಿಣಾಮದ ಜೇಷ್ಠತೆಯನ್ನು ಪಡೆಯಲು ಅವಕಾಶ ಕಲ್ಪಿಸಿದ್ದ ಸೆಕ್ಷನ್ 3 ಮತ್ತು 4ನ್ನು "ultra vires Articles 14 and 16 of the Constitution"ಎಂದು ಆದೇಶಿಸಿರುತ್ತದೆ. ಆದರೆ ಬಡ್ತಿಯಲ್ಲಿ ಮೀಸಲಾತಿಯನ್ನು ರದ್ದುಪಡಿಸಿರುವುದಿಲ್ಲ.<br>ಮಾನ್ಯ ಸರ್ವೋಚ್ಚ ನ್ಯಾಯಾಲಯದ ದಿನಾಂಕ:09.02.2017ರ ಆದೇಶವನ್ನು ಅನುಷ್ಠಾನಗೊಳಿಸಿದ ಪರಿಣಾಮವಾಗಿ ಹಿಂಬಡ್ತಿಯಾಗಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ನೌಕರರ ಹಿತ ಕಾಪಾಡಲು ರಾಜ್ಯ ಸರ್ಕಾರವು **ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿರುವ ಸರ್ಕಾರಿ ನೌಕರರಿಗೆ ತತ್ಪರಿಣಾಮವಾದ ಜೇಷ್ಠತೆಯನ್ನು ವಿಸ್ತರಿಸುವ ಅಧಿನಿಯಮ,2017 (ಕರ್ನಾಟಕ ಅಧಿನಿಯಮ ಸಂಖ್ಯೆ:21/2018)** ಅನ್ನು ದಿನಾಂಕ:23.06.2018ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿದೆ. |

............2

| | |
|---|---|
| ಆ)ಹಿಂಬಡ್ತಿಯಾಗಿರುವ ಅಧಿಕಾರಿ/ ನೌಕರರು ಮೊದಲಿದ್ದ ಹುದ್ದೆಯಲ್ಲೇ ಮುಂದುವರೆಯಲು ಸಂಖ್ಯಾಧಿಕ ಹುದ್ದೆಗಳನ್ನು (Supernumerary) ಸೃಜಿಸಿ ಅನುಕೂಲ ಮಾಡಿಕೊಡಲಾಗುವುದೇ; | ಅಧಿನಿಯಮ ಸಂಖ್ಯೆ:21/2018ರ **ಸೆಕ್ಷನ್ 5** ರಲ್ಲಿ ಮೀಸಲಾತಿ ಅಥವಾ ಬ್ಯಾಕ್‌ಲಾಗ್ ಖಾಲಿ ಸ್ಥಾನಗಳಿಗಿಂತ ಹೆಚ್ಚಾಗಿ ಅಥವಾ ಮೀಸಲಾತಿ ಉಪಬಂಧಗಳ ವ್ಯಾಪ್ತಿಯೊಳಗೆ ಈಗಾಗಲೇ ಮೀಸಲಾತಿ ಹೊಂದಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಸೇರಿದ ವ್ಯಕ್ತಿಗಳ ಸಂದರ್ಭದಲ್ಲಿ ರೋಸ್ಟರ್ ಬಿಂದುಗಳಿಗೆ ಪ್ರತಿಯಾಗಿ ಸರಿದೂಗಿಸಲು ಸಾಧ್ಯವಾಗದಿದ್ದಲ್ಲಿ ಅವರು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ವೃಂದದಲ್ಲಿ ಆ ವೃಂದದಲ್ಲಿ. ಅವರು ಬಡ್ತಿಗೆ ಅರ್ಹತೆಯನ್ನು ಪಡೆಯುವ ದಿನಾಂಕದವರೆಗೆ ಹಿಂಬಡ್ತಿಯಾಗಿರುವ ಅಧಿಕಾರಿ / ನೌಕರರು ಮೊದಲಿದ್ದ ಹುದ್ದೆಯಲ್ಲೇ ಮುಂದುವರೆಯಲು ಸಂಖ್ಯಾಧಿಕ ಹುದ್ದೆಗಳನ್ನು ಸೃಜಿಸಲು ಅವಕಾಶ ಕಲ್ಪಿಸಲಾಗಿದೆ.<br>ಪ್ರಸುತ ಸುತ್ತೋಲೆ ಸಂಖ್ಯೆ: ಸಿಆಸುಇ 277 ಸೇನೆನಿ 2018 ದಿನಾಂಕ:18.08.2018 ರಲ್ಲಿ ಹಿಂಬಡ್ತಿಗೊಳಗಾದ ಅಧಿಕಾರಿ/ನೌಕರರು ಹಿಂಬಡ್ತಿಗೊಳ್ಳುವುದಕ್ಕೆ ಮೊದಲು ಕರ್ತವ್ಯ ನಿರ್ವಹಿಸುತ್ತಿದ್ದ ಹುದ್ದೆಯ ವೇತನವನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡುವ ಅಂತಿಮ ಆದೇಶವನ್ನು ಪಾಲಿಸಕ್ಕದೆಂಬ ಷರತ್ತಿಗೊಳಪಡಿಸಿ ಅಡ್-ಹಾಕ್ ವೇತನವನ್ನಾಗಿ ಪಾವತಿಸಲು ಸೂಚನೆಗಳನ್ನು ನೀಡಲಾಗಿದೆ. |
| ಇ) ಸುಪ್ರೀಂ ಕೋರ್ಟ್ ಬಡ್ತಿ ಮೀಸಲಾತಿ ಬಗ್ಗೆ ಕ್ರಮ ಕೈಗೊಳ್ಳಲು ರಾಜ್ಯ ಸರ್ಕಾರದ ವಿವೇಚನೆಗೆ ಬಿಟ್ಟಿರುವುದರ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಯಾವ ನಿರ್ಧಾರವನ್ನು ಕೈಗೊಳ್ಳುತ್ತದೆ? | ಅಧಿನಿಯಮ ಸಂಖ್ಯೆ: 21/2018ರ ಕೆಲವು ಸೆಕ್ಷನ್‌ಗಳನ್ನು ಪ್ರಶ್ನಿಸಿ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಹಲವು ರಿಟ್ ಅರ್ಜಿಗಳು ದಾಖಲಾಗಿದ್ದು, ಸದರಿ ಪ್ರಕರಣಗಳನ್ನು ಎಂ.ಎ.ಸಂಖ್ಯೆ:1151/2018 ಬಿ.ಕೆ.ಪವಿತ್ರ ಮತ್ತಿತರರು ಪ್ರಕರಣಗಳೊಂದಿಗೆ ಒಟ್ಟುಗೂಡಿಸಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಿಚಾರಣೆ ನಡೆಸುತ್ತಿದೆ. ದಿನಾಂಕ: 27.07.2018ರಂದು ನಡೆದ ವಿಚಾರಣೆಯ ಸಂದರ್ಭದಲ್ಲಿ ಮುಂಬಡ್ತಿ/ ಹಿಂಬಡ್ತಿ ಪ್ರಕ್ರಿಯೆಯನ್ನು ಜರುಗಿಸದೇ ಯಥಾಸ್ಥಿತಿಯನ್ನು ಕಾಯ್ದುಕೊಳ್ಳಲು ಮೌಖಿಕ ನಿರ್ದೇಶನ ನೀಡಿರುತ್ತದೆ. ಅದರನ್ವಯ ಸುತ್ತೋಲೆ ಸಂಖ್ಯೆ: ಸಿಆಸುಇ 380 ಸೇನೆನಿ 2018 (ಭಾಗ-1) ದಿನಾಂಕ: 03.08.2018 ರಲ್ಲಿ ಸರ್ಕಾರದಿಂದ ಮುಂದಿನ ನಿರ್ದೇಶನ ನೀಡುವವರೆಗೆ ಯಾವುದೇ ಮುಂಬಡ್ತಿ /ಹಿಂಬಡ್ತಿ ಪ್ರಕ್ರಿಯೆಯನ್ನು ಕೈಗೊಳ್ಳದೇ ಯಥಾಸ್ಥಿತಿ ಕಾಪಾಡುವಂತೆ ಸೂಚಿಸಲಾಗಿದೆ. ಪ್ರಸ್ತುತ ಮೇಲ್ಕಂಡ ಪ್ರಕರಣಗಳು ವಿಚಾರಣೆಯ ಅಂತಿಮ ಹಂತದಲ್ಲಿದ್ದು, ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ನಿರೀಕ್ಷಿಸಲಾಗುತ್ತಿದೆ. |

ಸಂಖ್ಯೆ: ಸಿಆಸುಇ 181 ಎಸ್‌ಆರ್‌ಎಸ್ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ.